ಕರ್ನಾಟಕ ವಿಧಾನಸಭೆ

ಸೋಮವಾರ **21ನೇ ಜುಲೈ 2008** ರಂದು ಸದನವು
ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11ಗಂಟೆ **12** ನಿಮಿಷಗಳಿಗೆ ಸಮಾವೇಶಗೊಂಡಿತು.

ಅಧ್ಯಕ್ಷರು **ಶ್ರೀ ಜಗದೀಶ ಶೆಟ್ಟರ್**ರವರು ಪೀಠವನ್ನು ಅಲಂಕರಿಸಿದ್ದರು.

(ಸದನವು ಬೆಳಿಗ್ಗೆ 11-12ಕ್ಕೆ ಸಮಾವೇಶಗೊಂಡಿತು.)

ಅಧ್ಯಕ್ಷರು : ಎಲ್ಲಾ ಶಾಸಕರಲ್ಲಿ ನಾನೊಂದು ವಿನಂತಿಯನ್ನು ಮಾಡಿಕೊಂಡು ಇಂದಿನ ಪ್ರಶ್ನೋತ್ತರವನ್ನು ಪ್ರಾರಂಭ ಮಾಡುತ್ತೇನೆ. ಇವತ್ತು ಕೇವಲ ಐದು ಪ್ರಶ್ನೆಗಳಿವೆ. ಆದರೆ ಬರುವಂತಹ ದಿವಸಗಳಲ್ಲಿ ಇನ್ನೂ ಹೆಚ್ಚು ಪ್ರಶ್ನೆಗಳು ಇರುತ್ತವೆ. ನಾನು ಪ್ರಶ್ನೋತ್ತರ ಅವಧಿಯನ್ನು ಒಂದು ತಾಸಿಗೆ ಮಾತ್ರ ನಿಗದಿ ಮಾಡುತ್ತಿದ್ದೇನೆ. ಪ್ರಶ್ನೋತ್ತರಕ್ಕೆ ಒಂದು ತಾಸನ್ನು ಮಾತ್ರವೇ ರೂಲ್ಸ್‌ನಲ್ಲಿ ನಿಗದಿಗೊಳಿಸಿದ್ದರೂ ಸಹ, ಹಿಂದೆಲ್ಲಾ ಅದು 2-3 ತಾಸುಗಳವರೆಗೆ drag-on ಆಗಿರುವುದನ್ನು ನಾವು ನೋಡಿದ್ದೇವೆ. ಆ ರೀತಿಯಾಗದಂತೆ ಮಾನ್ಯ ಸದಸ್ಯರು ಸಹಕರಿಸಬೇಕು. ಯಾವುದೇ ಒಂದು ಉಪ ಪ್ರಶ್ನೆಯನ್ನು ಕೇಳುವಾಗ, ವಿವರವಾಗಿ ಅದನ್ನು ಕೇಳದೆ, up to the point ಮಾತ್ರವೇ ಕೇಳಬೇಕು. ಪ್ರಶ್ನೆಯಲ್ಲಿನ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತ್ರವೇ ಉಪ ಪ್ರಶ್ನೆಗಳನ್ನು ಕೇಳಬೇಕು. ಮಾನ್ಯ ಮಂತ್ರಿಗಳೂ ಸಹ ಪ್ರಶ್ನೆಗಳಿಗೆ ಉತ್ತರ ಹೇಳುವಾಗ, ಮಾನ್ಯ ಸದಸ್ಯರು ಏನೊಂದು ಪ್ರಶ್ನೆಯನ್ನು ಕೇಳಿರುತ್ತಾರೋ, ಅದಕ್ಕೆ ಸೀಮಿತವಾಗಿ ಉತ್ತರ ಹೇಳಿದರೆ ಸಮಯ ಉಳಿಯಲಿಕ್ಕೆ ಸಾಧ್ಯತೆ ಇರುತ್ತದೆ. ನಿಗದಿತ ಅವಧಿಯಲ್ಲಿ ಪ್ರಶ್ನೋತ್ತರ ಮುಗಿಸಲು ಮಾನ್ಯ ಶಾಸಕರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸಹಕಾರ ನೀಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು ಈಗ ಪ್ರಶ್ನೋತ್ತರವನ್ನು ಪ್ರಾರಂಭ ಮಾಡುತ್ತೇನೆ.

1. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಕೊಪ್ಪಳ ಹೊಸ ಜಿಲ್ಲೆಯಾದ ನಂತರ ಕ್ರೀಡಾಂಗಣ ಪೂರ್ಣಗೊಳಿಸುವುದರ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1 : (18)
ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)
ಉತ್ತರಿಸುವ ಸಚಿವರು : ಶ್ರೀ ಗುಳಿಹಟ್ಟಿ ಡಿ. ಶೇಖರ್
(ಜವಳಿ, ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು)

ಪ್ರಶ್ನೆ	ಉತ್ತರ
ಅ) ಕೊಪ್ಪಳ ಹೊಸ ಜಿಲ್ಲೆಯಾದ ನಂತರ ಕ್ರೀಡಾಂಗಣ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?	ಬಂದಿದೆ.

ಆ) ಈ ಕ್ರೀಡಾಂಗಣದಲ್ಲಿ ಹೊರಾಂಗಣ ಮತ್ತು ಒಳಾಂಗಣ ಆಟದ ಯೋಜನೆಯನ್ನು ಕೈಗೊಳ್ಳಲಾಗಿದೆಯೇ ?	ಕೈಗೊಳ್ಳಲಾಗುತ್ತಿದೆ.
ಇ) ಸದರಿ ಕ್ರೀಡಾಂಗಣ ನಿರ್ಮಾಣ ಮಾಡಲು ನಿಗದಿಪಡಿಸಿದ ಒಟ್ಟು ಹಣವೆಷ್ಟು ?	ರೂ.130.00 ಲಕ್ಷಗಳು
ಈ) ಸದರಿ ಕ್ರೀಡಾಂಗಣಕ್ಕೆ ಈಗಾಗಲೇ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ?	ರೂ.130.00 ಲಕ್ಷಗಳು
ಉ) ಹಾಗಿದ್ದಲ್ಲಿ, ಈ ಕ್ರೀಡಾಂಗಣದ ಕಾಮಗಾರಿಯನ್ನು ಈ ಸಾಲಿನ ಯೋಜನೆಯಲ್ಲಿ ಪೂರ್ಣಗೊಳಿಸಲಾಗುವುದೇ ?	ಈ ಕ್ರೀಡಾಂಗಣದ ಕಾಮಗಾರಿಯ ಅಂದಾಜು ವೆಚ್ಚವಾದ ರೂ. 130.00 ಲಕ್ಷ ಬಿಡುಗಡೆಗೊಳಿಸಿರುವುದರಿಂದ ಜಿಲ್ಲಾ ಕ್ರೀಡಾಂಗಣ ಸಮಿತಿ ಕೊಪ್ಪಳ ಯೋಜನೆಯನ್ನು ಈ ಸಾಲಿನಲ್ಲಿ ಪೂರ್ಣಗೊಳಿಸುವ ಜವಾಬ್ದಾರಿಯನ್ನು ಹೊಂದಿದೆ.

ಪೂರಕ ಟಿಪ್ಪಣಿ

ನೂತನ ಜಿಲ್ಲೆಯಾದ ಕೊಪ್ಪಳದಲ್ಲಿ ಜಿಲ್ಲಾ ಕ್ರೀಡಾಂಗಣವನ್ನು ನಿರ್ಮಿಸಲು ಜಿಲ್ಲಾ ಕ್ರೀಡಾಂಗಣ ಸಮಿತಿ ಕೊಪ್ಪಳ ಇಲ್ಲಿಂದ ರೂ.130.00 ಲಕ್ಷ ಅಂದಾಜು ವೆಚ್ಚದ ಪಟ್ಟಿಯ ಯೋಜನೆಯ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು ಪುರಸ್ಕರಿಸಿ ಸರ್ಕಾರಿ ಆದೇಶ ಸಂಖ್ಯೆ ಯುಸೇಇ/142/ಯುಸೇಕ್ರೀ/2006 ದಿನಾಂಕ : 14-9-2006 ರಂತೆ ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಕೇಂದ್ರ ಪುರಸ್ಕೃತ ಯೋಜನೆಯಡಿ ನೀಡಿದ ಹಣದಲ್ಲಿ ಈ ಯೋಜನೆಗೆ ಅಂದಾಜಿಸಿದ ವೆಚ್ಚ ರೂ.130.00 ಲಕ್ಷಗಳನ್ನು 2005-06 ನೇ ಸಾಲಿನಲ್ಲಿ ಬಿಡುಗಡೆಗೊಳಿಸಲಾಗಿದೆ.

ಈ ಯೋಜನೆಯ ನಿರ್ಮಾಣ ಕಾರ್ಯವನ್ನು ನಿರ್ಮಿತಿ ಕೇಂದ್ರ, ಕೊಪ್ಪಳ, ಇವರಿಗೆ ವಹಿಸಲಾಗಿದೆ. ಯೋಜನೆಯ ಕಾಮಗಾರಿಯೂ ಪ್ರಗತಿಯಲ್ಲಿದ್ದು, ಆದಷ್ಟು ಬೇಗ ಮುಕ್ತಾಯಗೊಳಿಸುವ ಜವಾಬ್ದಾರಿಯೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಸ್ತಿತ್ವದಲ್ಲಿರುವ ಜಿಲ್ಲಾ ಕ್ರೀಡಾಂಗಣ ಸಮಿತಿಯದ್ದಾಗಿರುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೇ, ಕೊಪ್ಪಳ ಜಿಲ್ಲೆಯಲ್ಲಿ ಕ್ರೀಡಾಂಗಣ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ, ಅಲ್ಲಿ ಹೊರಾಂಗಣ ಮತ್ತು ಒಳಾಂಗಣ ಆಟದ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ, ಅದಕ್ಕಾಗಿ 130 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ನಾನು ಅಲ್ಲಿ ಸ್ಥಳ ವೀಕ್ಷಣೆ ನಡೆಸಿದಂತಹ ಸಂದರ್ಭದಲ್ಲಿ ಅಲ್ಲಿ ಇನ್ನೂ ground clearance ಆಗಿಲ್ಲದಿರುವುದು ಕಂಡು ಬಂದಿತು. ಹೈದರಾಬಾದ್-ಕರ್ನಾಟಕದಲ್ಲಿ ಕೊಪ್ಪಳ ಹೊಸ ಜಿಲ್ಲೆಯಾಗಿರುವುದರಿಂದ, addition to that ಅಲ್ಲೊಂದು ಈಜುಗೊಳ ನಿರ್ಮಾಣ ಮಾಡಬೇಕೆಂದು proposal submit ಮಾಡಿದ್ದೇವೆ. ನಮ್ಮ ಭಾಗದಲ್ಲಿ ಈಜುಗೊಳ ಅತ್ಯಗತ್ಯವಾಗಿದೆ. ಈಜನ್ನು ಇವತ್ತು ನಾವು ಮರೆಯುತ್ತಿದ್ದೇವೆ. ಮೊದಲು open wells ಇರುತ್ತಿದ್ದವು, ಮಡುಗಳು ಇರುತ್ತಿದ್ದವು, ಅಲ್ಲೆಲ್ಲಾ ಈಜುತ್ತಿದ್ದರು. ಈಗ ಗ್ರಾಮೀಣ ಪ್ರದೇಶದಲ್ಲಿ ಇರಬಹುದು ಅಥವಾ ನಗರ ಪ್ರದೇಶದಲ್ಲಿ ಇರಬಹುದು, ಈಜು ಎಂಬುದು ಜಲಕ್ರೀಡೆಯಲ್ಲಿ ಅತ್ಯಂತ ಮುಖ್ಯವಾದುದಾಗಿದೆ. ಅದನ್ನು ನಾವು ಇಂದು ಉಳಿಸಬೇಕಾಗಿದೆ. ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಸದೃಢರಾಗಲು ಇಂದಿನ ಯುವಕರಿಗೆ ಈಜು ಅತ್ಯವಶ್ಯಕವಾಗಿದೆ. ಈಜುಗೊಳಕ್ಕಾಗಿ ಈಗಾಗಲೇ 1.16 ಕೋಟಿ ರೂ.ಗಳ estimate ಅನ್ನೂ ಕೂಡಾ submit ಮಾಡಲಾಗಿದೆ.

ಅಧ್ಯಕ್ಷರು : ವಿಷಯಕ್ಕೆ ಸಂಬಂಧಪಟ್ಟಂತೆ ನಿಮಗೇನು ಬೇಕೋ, ಅದರ ಬಗ್ಗೆ ಮಾತ್ರವೇ ಉಪಪ್ರಶ್ನೆ ಕೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಇದೇ ವರ್ಷದಲ್ಲಿ ಅಲ್ಲಿ ಈಜುಗೊಳದ ನಿರ್ಮಾಣವನ್ನು ಕೈಗೆತ್ತಿಕೊಂಡು complete ಮಾಡುತ್ತೀರಾ ಎಂದು ನಾನು ಪ್ರಶ್ನೆ ಕೇಳುತ್ತಿದ್ದೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ತಾವೊಂದು ಸಲಹೆ ಕೊಟ್ಟಿದ್ದೀರಿ. ತಮ್ಮ ಸಲಹೆಯನ್ನು ಪರಿಶೀಲಿಸಿ ನಾನು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಮುಖ್ಯಮಂತ್ರಿಗಳು ಕೇವಲ 'ಪರಿಶೀಲಿಸುತ್ತೇನೆ' ಎಂದರೆ ಅದು ಸಮಂಜಸವಾದ ಉತ್ತರವಾಗುವುದಿಲ್ಲ. ಹೈದರಾಬಾದ್-ಕರ್ನಾಟಕದಲ್ಲಿ ಬಹಳಷ್ಟು imbalance ಇದೆ...

ಅಧ್ಯಕ್ಷರು : ನೀವು ಕೊಪ್ಪಳ ಜಿಲ್ಲೆಯಲ್ಲಿ ಕ್ರೀಡಾಂಗಣ ಪ್ರಾರಂಭವಾಗಿರುವ ಬಗ್ಗೆ ಪ್ರಶ್ನೆ ಕೇಳಿದ್ದೀರಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಆ ಪ್ರಶ್ನೆಗೆ ಅನುಗುಣವಾಗಿಯೇ ನಾನು ಉಪ ಪ್ರಶ್ನೆ ಕೇಳುತ್ತಿದ್ದೇನೆ. ಅಲ್ಲಿಗೆ ಬಿಡುಗಡೆ ಮಾಡಿರುವ 1.30 ಕೋಟಿ ರೂ.ಗಳು ಸಾಕಾಗುವುದಿಲ್ಲ. ಅಲ್ಲಿ ground ಇನ್ನೂ clearance ಆಗಿಲ್ಲ, ಅಲ್ಲಿ ಇನ್ನೂ 400 track ನಿರ್ಮಾಣ ಮಾಡಬೇಕಾಗಿದೆ. ಅದಕ್ಕೆ ಪೂರಕವಾಗಿಯೇ ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆಂದು ನಾನು ತಿಳಿದುಕೊಂಡಿದ್ದೇನೆ. ಪ್ರಶ್ನೆಗಷ್ಟೇ ಸೀಮಿತವಾಗಿರಬೇಕೆಂದು ಅಷ್ಟೊಂದು strict ಆಗಿ restriction ಹಾಕಿದರೆ, ನಾವು Assembly ಯಲ್ಲಿ ಯಾವ ರೀತಿಯಾಗ ಪ್ರಶ್ನೆಯನ್ನು raise ಮಾಡಬೇಕು?

ಅಧ್ಯಕ್ಷರು : ನಾನು ಹೇಳುವುದೇನೆಂದರೆ.....

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೇ, ತಾವು ಹೇಳುವುದು ನನಗೆ ಅರ್ಥವಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಶ್ನೆಗಷ್ಟೇ ಸೀಮಿತವಾಗಿ ನಾವು ಮಾತನಾಡಬೇಕೆಂದರೆ ಹೇಗೆ? ಅದಕ್ಕೆ ಪೂರಕವಾಗಿಯೇ ನಾನು ಉಪಪ್ರಶ್ನೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ದಯವಿಟ್ಟು ನಾನು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ತಾವು ಆ ತರಹ restriction ಹಾಕಿದರೆ ಹೇಗೆ?

ಅಧ್ಯಕ್ಷರು : ನಾನು ಹೇಳುವುದನ್ನು ಕೇಳಿ ಅಥವಾ ತಾವೇ ಮಾತನಾಡುವುದಾದರೆ ಮಾತನಾಡಿ. ನಾನು ತಮ್ಮಲ್ಲೊಂದು ಸ್ಪಷ್ಟೀಕರಣ ಕೇಳುತ್ತಿದ್ದೇನೆ. ಕ್ರೀಡಾಂಗಣಕ್ಕಾಗಿ 1.30 ಕೋಟಿ ರೂ.ಗಳ ಹಣ sanction ಆಗಿದೆ, ಅದು release ಕೂಡಾ ಆಗಿದೆ ಎಂದು ಸಚಿವರು ಹೇಳಿದ್ದಾರೆ. ಆ ಹಣ release ಆಗಿದೆಯೋ, ಇಲ್ಲವೋ?

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಆಗಿದೆ.

ಅಧ್ಯಕ್ಷರು : ಬಿಡುಗಡೆಯಾದ 1.30 ಕೋಟಿ ರೂ.ಗಳಲ್ಲಿ ಏನೇನು ಕೆಲಸಗಳಾಗಬೇಕು ಎಂಬುದು ಈಗಾಗಲೆ ನಿಗದಿಪಡಿಸಲಾಗಿರುತ್ತದೆ. ಅದನ್ನು ಹೊರತುಪಡಿಸಿ, ನೀವು ಈಗ ಈಜುಗೊಳ ನಿರ್ಮಾಣ ಮಾಡಬೇಕೆಂದು ಕೇಳುತ್ತಿದ್ದೀರಿ. ಅದನ್ನು ಬೇರೆ additional ಪ್ರಶ್ನೆ ರೂಪದಲ್ಲಿ ತಾವು ಕೇಳಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಅದು ಬೇರೆಯದ್ದೇನೂ ಅಲ್ಲ, ಅದಕ್ಕಾಗಿ ಈಗಾಗಲೇ estimate ಕೂಡಾ submit ಮಾಡಲಾಗಿದೆ.

ಅಧ್ಯಕ್ಷರು : 1.30 ಕೋಟಿ ರೂ.ಗಳ ಕಾಮಗಾರಿಗಳ ವ್ಯಾಪ್ತಿಗೆ ಅದು ಬರುತ್ತದೆಯೇ?

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ : ಒಳಾಂಗಣ ಕ್ರೀಡಾಂಗಣದಲ್ಲೇ ಅದು ಬರುತ್ತದೆ. ಅದಕ್ಕಾಗಿ ಹಿಂದಿನ ಸರ್ಕಾರ ಇದ್ದಾಗ sub estimate ಮಾಡಲಾಗಿತ್ತು. ಅದನ್ನು approve ಮಾಡಿ ಎಂದು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇವೆ. ನಮ್ಮಲ್ಲಿ ಈಜಿಗೆ ಯಾವುದೇ ಸೌಕರ್ಯವಿಲ್ಲ. ಯಾವುದಾದರೂ ವ್ಯಾಪ್ತಿಯಲ್ಲಿ ಈಜುಗೊಳ ನಿರ್ಮಾಣವನ್ನು ಕೈಗೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟರೆ ಒಳ್ಳೆಯದು ಎಂಬುದು ನನ್ನ ಅನಿಸಿಕೆಯಾಗಿದೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಈಗಾಗಲೇ ನಾವು 1 ಕೋಟಿ 30 ಲಕ್ಷ ರೂ.ಗಳ ಅಂದಾಜಿನಲ್ಲಿ ಕೊಪ್ಪಳದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುತ್ತಿದ್ದೇವೆ. ಅದರ ಜೊತೆಗೆ ಉತ್ತಮವಾದ swimming pool ನಿರ್ಮಿಸಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅದನ್ನು ಪರಿಶೀಲಿಸುತ್ತೇವೆ. ಖಂಡಿತವಾಗಿಯೂ ಮುಂದಿನ ದಿನಗಳಲ್ಲಿ ಅದಕ್ಕೆ ಅವಕಾಶ ಮಾಡುವಂತಹ ವ್ಯವಸ್ಥೆಯನ್ನು ನಾವು ಮಾಡಬಹುದಾಗಿದೆ.

ಅಧ್ಯಕ್ಷರು : ಮಾನ್ಯ ಕ್ರೀಡಾ ಮಂತ್ರಿಗಳೇ, 1.30 ಕೋಟಿ ರೂ.ಗಳಲ್ಲಿ ಕೇವಲ ಕ್ರೀಡಾಂಗಣ ನಿರ್ಮಾಣ ಮಾತ್ರ ಸೇರಿದೆಯೇ? ಅಥವಾ swimming pool ನಿರ್ಮಾಣವೂ ಅದರಲ್ಲಿ include ಆಗಿದೆಯೇ?

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಇಲ್ಲ ಸಾರ್, swimming pool ನಿರ್ಮಾಣ ಅದರಲ್ಲಿ ಸೇರಿಲ್ಲ. ಕೇವಲ ಕ್ರೀಡಾಂಗಣ ನಿರ್ಮಾಣಕ್ಕಾಗಿ ಮಾತ್ರ ಆ ಹಣ ಬಿಡುಗಡೆ ಮಾಡಲಾಗಿದೆ.

ಅಧ್ಯಕ್ಷರು : ಈಗ swimming pool ಅನ್ನು ನಿರ್ಮಿಸುವಂತೆ ಮಾನ್ಯ ಸದಸ್ಯರು extra ಕೇಳುತ್ತಿದ್ದಾರಲ್ಲವೇ?

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಹೌದು. ಅವರು ಅದನ್ನು additional ಆಗಿ ಕೇಳುತ್ತಿದ್ದಾರೆ.

ಅಧ್ಯಕ್ಷರು : ನೀವು ಅದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಹೌದು, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ : ಮಾನ್ಯ ಅಧ್ಯಕ್ಷರೇ, ಒಳಾಂಗಣ ಕ್ರೀಡಾಂಗಣದಲ್ಲಿ ಅದೂ ಕೂಡಾ ಇರುತ್ತದೆ. ಕೆಲವು ಕಡೆ ಅದನ್ನು ಮಾಡಿದ್ದಾರೆ. ಅದಕ್ಕಾಗಿ ನಾವು ಹಿಂದಿನ ಸರ್ಕಾರ ಇದ್ದಾಗ ಒತ್ತಾಯ ಮಾಡಿದ್ದೆವು. ಆಗ...

ಅಧ್ಯಕ್ಷರು : ಮಾನ್ಯ ಅಮರೇಗೌಡರೇ, ತಾವು ನನಗೊಂದು ಸ್ಪಷ್ಟೀಕರಣ ಕೊಡಿ. ಆ 1.30 ಕೋಟಿ ರೂ.ಗಳಲ್ಲಿ ಅದು ಇದೆಯೋ, ಇಲ್ಲವೋ?

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ : ಇಲ್ಲ.

ಅಧ್ಯಕ್ಷರು : ಅದು ಇಲ್ಲವೆಂದರೆ, ಅದನ್ನೂ ಸೇರಿಸಿ ಎಂದು ಕೇಳಿಕೊಳ್ಳಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ : ಅದನ್ನೇ ನಾವು ಕೇಳುತ್ತಿದ್ದೇವೆ. ಇದರಲ್ಲಿ ಅದು ಸೇರಿಲ್ಲ, ಅದನ್ನೂ ಕೂಡ ಸೇರಿಸಿ ಎಂದು ಮಾನ್ಯ ಸಚಿವರಿಗೆ ನಾವು ಮನವಿ ಮಾಡುತ್ತಿದ್ದೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೇ, ಇದಕ್ಕಾಗಿ 3.21 ಕೋಟಿ ರೂ.ಗಳನ್ನು ನಿಗದಿ ಮಾಡಿದ್ದಾರೆ. ಅದರಲ್ಲಿ 1.30 ಕೋಟಿ ರೂ.ಗಳ ಹಣ ಬಿಡುಗಡೆಯಾಗಿದೆ. Remaining amount ಬಿಡುಗಡೆ ಮಾಡಿ, ಈಜುಗೊಳ ನಿರ್ಮಾಣ ಮಾಡಿ ಎಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳದೆ, ಕೇವಲ ಪರಿಶೀಲಿಸುತ್ತೇವೆ ಎಂದು ಹೇಳಿದರೆ ಹೇಗೆ? ಮಾನ್ಯ ಸಚಿವರು ಯುವಕರು, ಅವರು ಜಲಕ್ರೀಡೆಗೆ ಮಹತ್ವ ಕೊಡಬೇಕಾಗುತ್ತದೆ. ಮಾನ್ಯ ಸಚಿವರಿಗೆ ಬಹಳಷ್ಟು ಭವಿಷ್ಯವಿದೆ. ಯುವ ಪೀಳಿಗೆಗೆ ತಾವೊಂದು ಅವಕಾಶವನ್ನು ಕಲ್ಪಿಸಿಕೊಡಿ. ಹಿಂದುಳಿದ ಪ್ರದೇಶವಾದ ನಮ್ಮಲ್ಲಿ ಈಜುಗೊಳ ನಿರ್ಮಾಣ ಮಾಡಲು ಮಾನ್ಯ ಅಧ್ಯಕ್ಷರು ಮಾನ್ಯ ಸಚಿವರಿಗೆ ಹೇಳಬೇಕು. ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಕಾರಜೋಳ ಸಾಹೇಬರಿಗೆ ವಿಷಯ ಗೊತ್ತಿದೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ತಾವು ಖಂಡಿತವಾಗಿ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಈ ತರಹ ಉತ್ತರ ಹೇಳುವುದಾದರೆ, ನಾವು question ಕೇಳಿ ಏನೂ ಪ್ರಯೋಜನವಿಲ್ಲ.

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣನವರೇ, ತಾವೇನು ಪ್ರಶ್ನೆ ಕೇಳಿದ್ದೀರೋ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಹೇಳಿದ್ದಾರೆ. ನೀವು additional ಆಗಿ ಕೇಳಿದ್ದಕ್ಕೂ ಅವರು ಉತ್ತರ ಹೇಳಿದ್ದಾರೆ. ಆದ್ದರಿಂದ ನಾವು next ಪ್ರಶ್ನೆಗೆ ಹೋಗೋಣ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರು ನಮ್ಮ ನೆರವಿಗೆ ಬರಬೇಕು.

ಅಧ್ಯಕ್ಷರು : ನೀವು additional ಆಗಿ ಕೆಲವೊಂದು ಬೇಕು ಎಂದು ಕೇಳಿದ್ದೀರಿ. ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ಅದಕ್ಕಿಂತ ಇನ್ನೇನು ಬೇಕು? ಈಗಲೇ ಅದನ್ನು sanction ಮಾಡುತ್ತೇನೆಂದು ಹೇಳಲಿಕ್ಕಾಗುತ್ತದೆಯೇ? ಅನುಭವಿ ಶಾಸಕರಾದ ತಾವು ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಜಯಚಂದ್ರರವರದು. ಅದನ್ನು ತಡೆಹಿಡಿಯಲಾಗಿದೆ. ಮಾನ್ಯ ಸಚಿವರು ಮುಂದೆ ಅದನ್ನು ತೆಗೆದುಕೊಳ್ಳಲು ವಿನಂತಿ ಮಾಡಿದ್ದಾರೆ. ಮುಂದೆ ಅದನ್ನು ತೆಗೆದುಕೊಳ್ಳುತ್ತೇನೆ.

ತಮಿಳುನಾಡು ಸರ್ಕಾರವು ಹೊಗೇನಕಲ್‌ನಲ್ಲಿ
ಕುಡಿಯುವ ನೀರಿನ ಯೋಜನೆಯನ್ನು ಜಾರಿ ಮಾಡುತ್ತಿರುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 3 : (30)

ಸದಸ್ಯರ ಹೆಸರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್)

ಉತ್ತರಿಸುವ ಸಚಿವರು : ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ	ತಮಿಳುನಾಡು ಸರ್ಕಾರವು ಇತ್ತೀಚೆಗೆ ಹೊಗೇನಕಲ್‌ನಲ್ಲಿ ಆರಂಭಿಸಿರುವ ಕುಡಿಯುವ ನೀರಿನ ಯೋಜನೆ ಮತ್ತು ಜಲವಿದ್ಯುತ್ ಯೋಜನೆಯ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ	ತಮಿಳುನಾಡು ಸರ್ಕಾರವು ಹೊಗೇನಕಲ್ ಬಳಿ ಪ್ರಾರಂಭಿಸಿರುವ ಕುಡಿಯುವ ನೀರಿನ ಯೋಜನೆಯ ವಿಷಯವು ರಾಜ್ಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಯೋಜನೆಯ ಬಗ್ಗೆ ಕೆಲ ಸ್ಪಷ್ಟೀಕರಣಗಳನ್ನು ರಾಜ್ಯ ಸರ್ಕಾರವು ತಮಿಳುನಾಡು ಸರ್ಕಾರದಿಂದ ಕೇಳಿದೆ ಹಾಗೂ ಕೇಂದ್ರ ಸರ್ಕಾರದ ಗಮನವನ್ನು ಸಹ ಸೆಳೆಯಲಾಗಿದೆ.